**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.**

# **O.S. No**. 611/2014

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ ಬಿ ಸಿದ್ದಯ್ಯ |
| ತಂದೆಯ ಹೆಸರು | : | ಲೇಟ್ ಬೆಳ್ಳಯ್ಯ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಅಧೀಕ್ಷಕರು, ಭೂ–ದಾಖಲೆಗಳ ಸಹಾಯಕ ನಿರ್ದೇಶಕರವರ ಕಛೇರಿ, ನಂಜನಗೂಡು |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 26.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ**

ನಾನು 2024 ರಿಂದ ಇಲ್ಲಿಯರವರೆಗೆ ನಂಜನಗೂಡಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರವರ ಕಛೇರಿಯಲ್ಲಿ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನ್ಯಾಯಾಲಯದಿಂದ ಭೂ-ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಕಮೀಷನರ್ ವಾರೆಂಟ್ ಬಂದಿದ್ದು, ನಮ್ಮ ಭೂ-ದಾಖಲೆಗಳ ಸಹಾಯಕ ನಿರ್ದೇಶಕರು ವರದಿ ಸಲ್ಲಿಸಲು ನನ್ನನ್ನು ನೇಮಕ ಮಾಡಿರುತ್ತಾರೆ, ಅದರಂತೆ ನಾನು ಕಮೀಷನರ್ ವಾರೆಂಟ್ ನ್ನು ಪಡೆದು, ಉಭಯ ಪಕ್ಷಗಾರರಿಗೆ ನೋಟಿಸ್ ನೀಡಿ ನಂತರ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸ್ಥಳದಲ್ಲಿ ವಾದಿ ಮತ್ತು ಪ್ರತಿವಾದಿ ಹಾಜರಿದ್ದು, ನಂತರ ಉಭಯಪಕ್ಷಗಾರರು ನೀಡಿದ ಸೂಚನಾವಳಿಗಳನ್ನು ಪಡೆದು ನಾನು ಅವರಿಗೆ ಮಾಹಿತಿ ನೀಡಿ, ಅಳತೆ ಮಾಡಿ ನ್ಯಾಯಾಲಯಕ್ಕೆ ವರದಿ ನೀಡುವುದಾಗಿ ಹೇಳಿರುತ್ತೇನೆ. ನಾನು ಸ್ಥಳದಲ್ಲಿ ಉಭಯಪಕ್ಷಗಾರರ ಸಮಕ್ಷಮ ಅಳತೆ ಮಾಡಿ ಮಹಜರ್ ತಯಾರಿಸಿದ ನಂತರ ಉಭಯಪಕ್ಷಗಾರರು ಸಹಿ

ಮಾಡಿರುತ್ತಾರೆ. ನಂತರ ಸ್ಥಳದಲ್ಲಿ ಮಹಜರ್ ಬಗ್ಗೆ ಓದಿ ತಿಳಿಸಿರುತ್ತೇನೆ. ನಂತರ ನಕ್ಷೆ ತಯಾರಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ.

ನ್ಯಾಯಾಲಯದಿಂದ ಬಂದ ವಾರೆಂಟ್ ನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ವಾರೆಂಟ್ ನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿ.ಪಿ–1** ಎಂದು ಗುರುತಿಸಲಾಯಿತು.

ವಾರೆಂಟ್ ಜೊತೆ ಲಗತ್ತಿಸಿದ ವಾದಪತ್ರ, ವಾದಿ ಮತ್ತು ಪ್ರತಿವಾದಿ ಪರ ವಕೀಲರು ಸಲ್ಲಿಸಿರುವ ಸೂಚನಾವಳಿಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ವಾದಪತ್ರ ಮತ್ತು 2 ಸೂಚನಾವಳಿಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ **ನಿ.ಪಿ–2** ರಿಂದ **4** ಎಂದು ಗುರುತಿಸಲಾಯಿತು.

ವಾದಿ ಮತ್ತು ಪ್ರತಿವಾದಿಗೆ ಕಳುಹಿಸಿದ 4 ನೋಟಿಸಿನ ಪ್ರತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ **ನಿ.ಪಿ–5** ರಿಂದ **8** ಎಂದು ಗುರುತಿಸಲಾಯಿತು.

ನಮ್ಮ ಕಛೇರಿಯಿಂದ ಅಳತೆ ಮಾಡಲು ನನ್ನನ್ನು ನಿಯೋಜಿಸಿದ ಬಗ್ಗೆ ನೀಡಿದ ಜ್ಞಾಪನವನ್ನು ಹಾಜರುಪಡಿಸಿದ್ದೇನೆ. ಅದನ್ನು **ನಿ.ಪಿ-9** ಎಂದು ಗುರುತಿಸಲಾಯಿತು.

ಸ್ಥಳದಲ್ಲಿ ಹೇಳಿ ಬರೆಸಿದ ಹೇಳಿಕೆ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿ.ಪಿ-10** ಎಂದು ಗುರುತಿಸಲಾಯಿತು.

ಉಭಯಪಕ್ಷಗಾರರು ಸಲ್ಲಿಸಿದ ಸೂಚನಾವಳಿಗಳಿಗೆ ನಾನು ಪ್ರತ್ಯೇಕವಾಗಿ ನೀಡಿದ ಉತ್ತರದ ಪ್ರತಿಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಉತ್ತರದ ಪ್ರತಿಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ **ನಿ.ಪಿ-11** ಮತ್ತು **12** ಎಂದು ಗುರುತಿಸಲಾಯಿತು.

ಅಳತೆಯಂತೆ ತಯಾರಿಸಿದ ನಕ್ಷೆಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು

ನಕ್ಷೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿ.ಸಿ-13** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಸಿ-13(ಎ)** ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಬಿ.ವೈ, ವಕೀಲರಿಂದಃ**

ವಿವಾದಿತ ಸ್ವತ್ತಿನ ಸಂಖ್ಯೆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವುದರಿಂದ ಫ್ರಾರಂಭದಲ್ಲಿ ಅಳತೆ ಮಾಡಲು ಮುಂದೆ ಬಂದಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ ಸ್ಥಳದಲ್ಲಿ ಕ್ರಯಪತ್ರದ ಪ್ರತಿಯನ್ನು ಕೊಟ್ಟಿದ್ದರು ಎಂದರೆ ಸರಿ. ಕ್ರಯಪತ್ರದ ಚೆಕ್ ಬಂದಿ ಪ್ರಕಾರ ನಾನು ಸ್ವತ್ತನ್ನು ಗುರುತಿಸಿರುತ್ತೇನೆ. ಸದರಿ ವಿವಾದಿತ ಸ್ವತ್ತನ್ನು ನನಗೆ ನಿಖರವಾಗಿ ಗುರುತಿಸಲು ಸಾಧ್ಯವಾಗಿರುತ್ತದೆ. ವಿವಾದಿತ ಸ್ವತ್ತಿನ ಉತ್ತರಕ್ಕೆ ಸರ್ವೆ ನಂ. 70/2 ಡಿ ಸ್ವತ್ತು ಇರುತ್ತದೆ. ನಾನು ಸರ್ವೆ ನಂ. 70/2 ಡಿ ಸ್ವತ್ತನ್ನು ಗುರುತಿಸಿಕೊಂಡು ನಂತರ ವಿವಾದಿತ ಸ್ವತ್ತನ್ನು ಗುರುತಿಸಿರುತ್ತೇನೆ. ಸರ್ವೆ ನಂ. 70/2 ಡಿ ಯ ದಕ್ಷಿಣಕ್ಕೆ ವಿವಾದಿತ ಸ್ವತ್ತು ಇದ್ದು, ಅದರ ವಿಸ್ತೀರ್ಣ 10 ಗುಂಟೆ ಇರುತ್ತದೆ. ವಿವಾದಿತ ಸ್ವತ್ತಿನಲ್ಲಿ ವಾಸದ ಮನೆಯಾಗಲಿ ಅಥವಾ ದನದ ಕೊಟ್ಟಿಗೆಯಾಗಲಿ ಇರುವುದಿಲ್ಲ, ಅಲ್ಲಿ ಗಿಡ-ಗೆಂಟೆಗಳು ಬೆಳೆದಿರುತ್ತವೆ. ಉಭಯಪಕ್ಷಗಾರರು ನೀಡಿರುವ ಸೂಚನಾವಳಿಗಳಿಗನುಸಾರವಾಗಿ ನಾನು ನಿಸಿ-13 ನ್ನು ತಯಾರಿಸಿರುತ್ತೇನೆ. ವಿವಾದಿತ ಸ್ವತ್ತಿನ ಬಗ್ಗೆ ಅಧೀಕೃತ ಬಡಾವಣೆ ನಕ್ಷೆಯನ್ನು ಕೊಟ್ಟಿರುವುದಿಲ್ಲ, ಆದರೆ ಪಂಚಾಯಿತಿಯಿಂದ ನೀಡಿರುತ್ತಾರೆಂದು ಹೇಳಿರುವ ವಿನ್ಯಾಸ ನಕ್ಷೆಯ ಪ್ರತಿ ನೀಡಿರುತ್ತಾರೆ. ಆ ನಕ್ಷೆಯಲ್ಲಿ ಕಛೇರಿಯ ಮೊಹರು ಅಥವಾ ಸಂಬಂಧಪಟ್ಟ ಅಧಿಕಾರಿಗಳ ಸಹಿ ಇರುವುದಿಲ್ಲ. ವಿವಾದಿತ ಸ್ವತ್ತಿನಲ್ಲಿ ಯಾವುದೇ ನಿವೇಶನಗಳನ್ನು ಮಾಡಿರುವ ಬಗ್ಗೆ ಹಾಗು ರಸ್ತೆಗಳನ್ನು ನಿರ್ಮಿಸಿರುವ ಬಗ್ಗೆ ಕುರುಹುಗಳು ಕಂಡು ಬಂದಿರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರಿದು ಸರ್ವೆ ನಂ. 70/2 ಎ2 ಮತ್ತು 70/2 ಎ3 ಅನ್ಯಕ್ರಾಂತವಾಗಿ ಪಂಚಾಯಿತಿಯಿಂದ ಜಂಜರ್ ನಂ.2010 ಎಂದು ಖಾತೆ ಮಾಡಿಸಿಕೊಂಡು ಅದರಲ್ಲಿ 8 ನಿವೇಶನಗಳನ್ನು ರಚನೆ ಮಾಡಿರುವ

ಬಗ್ಗೆ ದಾಖಲೆಗಳನ್ನು ತೋರಿಸಿರುತ್ತಾರೆಂದು ನುಡಿಯುತ್ತಾರೆ. ಸದರಿ ಜಂಜರ್ ನಂಬರ್ ರದ್ದಾಗಿರುವ ವಿಚಾರ ನನಗೆ ಗೊತ್ತಿಲ್ಲ. ನಾಗಮಹದೇವಪ್ಪ ಮತ್ತು ಹೆಚ್ ಸಿ ಪುಟ್ಟಯ್ಯ ರವರ ಹೆಸರಿಗೆ ತಲಾ 10 ಗುಂಟೆ ಜಮೀನು 1974 ರಲ್ಲಿಯೇ ಅನ್ಯಕ್ರಾಂತವಾಗಿರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ 2 ಸರ್ವೆ ನಂಬರುಗಳ ಆಸ್ತಿಗೆ ಸಂಬಂಧಿಸಿದಂತೆ 1987 ರಲ್ಲಿ ವಾದಿಗೆ ಮಾರಾಟ ಮಾಡಿದವರ ಹೆಸರಿಗೆ ತಹಶೀಲ್ದಾರ್ ಕಛೇರಿಯಿಂದ ಅನ್ಯಕ್ರಾಂತವಾಗಿರುತ್ತದೆ ಎಂದರೆ ಸರಿ. ನಾನು ವಿವಾದಿತ ಸ್ವತ್ತಿಗೆ ಭೇಟಿ ನೀಡಿದ ಸಮಯದಲ್ಲಿ ಸದರಿ ಸ್ವತ್ತಿನ ಪೂರ್ವ ಮತ್ತು ಉತ್ತರಕ್ಕೆ ತಂತಿಬೇಲಿ ಮತ್ತು ಪಶ್ಚಿಮಕ್ಕೆ ಗೇಟ್ ಇರುವ ಕಾಂಪೌಂಡ್ ವಾಲ್ ಇತ್ತು ಮತ್ತು ಅದರೊಳಗಡೆ ಜೆಲ್ಲಿ ಕಲ್ಲು ಮತ್ತು ಸೈಜ್ ಗಲ್ಲುಗಳು ಇದ್ದವು. ನಿಪಿ-13 ರ ವಾದಿಗೆ ಸಂಬಂಧಿಸಿದಂತೆ ಎಂದು ನೀಡಿರುವ ವಿವರಣೆಯಲ್ಲಿ ಯಾವುದೇ ನಿವೇಶನಗಳು ರಚನೆಯಾಗದಿದ್ದರೂ ನಕ್ಷೆಯಲ್ಲಿ ತೋರಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಪಂಚಾಯಿತಿಯಿಂದ ನೀಡಿರುತ್ತಾರೆಂದು ನನಗೆ ನೀಡಿದ ವಿನ್ಯಾಸ ನಕ್ಷೆಯಲ್ಲಿ ನಿವೇಶನಗಳ ಬಗ್ಗೆ ಹೇಳಿದ್ದರಿಂದ ಅದನ್ನು ಮನವರಿಕೆ ಮಾಡಿಕೊಳ್ಳುವ ಉದ್ದೇಶದಿಂದ ನಕ್ಷೆಯಲ್ಲಿ ತೋರಿಸಿರುತ್ತೇನೆ, ಆದರೆ ಸದರಿ ನಿವೇಶನ ರಚನೆಯಾಗಿರುವ ಬಗ್ಗೆ ನನ್ನ ವರದಿಯಲ್ಲಿ ತಿಳಿಸಿರುತ್ತೇನೆ ಮತ್ತು ಆ ರೀತಿ ಯಾವುದೇ ನಿವೇಶನಗಳು ರಚನೆಯಾಗಿರುವುದಿಲ್ಲ.

<u>**ಮರುವಿಚಾರಣೆಃ**</u> ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ನಂಜನಗೂಡು.**